ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. ನಂ. 2169/2025**

ಪಿರ್ಯಾದುದಾರರು ಃ ನ್ಯಾಮತಿ ಪೊಲೀಸರು.

- ವಿರುದ್ಧ -

ಆರೋಪಿ ಃ ರಮೇಶ ನಾಯ್ಕ ಬಿನ್ ಮಂಗ್ಲನಾಯ್ಕ,
52 ವರ್ಷ,
ವಾಸಃ ಕುರುವ ತಾಂಡ, ನ್ಯಾಮತಿ ತಾಲ್ಲೂಕು.

ದೋಷಾರೋಪಣೆ ಃ

ಶ್ರೀ. ಪುಣ್ಯಕೋಟಿ ಎಸ್ ಎನ್ ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ನಿಮ್ಮ ಮೇಲೆ ಮಾಡುತ್ತಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 15-09-2025 ರಂದು ಬೆಳಗ್ಗೆ 9.30 ಗಂಟೆ ಸಮಯದಲ್ಲಿ ನ್ಯಾಮತಿ ಪೊಲೀಸ್ ಠಾಣಾ ಸರಹದ್ದು, ಕುರುವ ತಾಂಡದ ಮಂಗ್ಲನಾಯ್ಕ ಬಿನ್ ಕಾಳಾನಾಯ್ಕ ಇವರ ವಾಸದ ಮನೆಯ ಪೂರ್ವ ದಿಕ್ಕಿನ ಖಾಲಿ ಜಾಗದ ಹತ್ತಿರ ಸಾಕ್ಷಿ-1 ರವರಿಗೆ ಹೊಗಲೇ ಬೋಸುಡಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ನೀನು ಲಂಚ ತಗೊಂಡು, ನೀನ್ ಏನ್ ನನಗೆ ಹೇಳಲಿಕ್ಕೆ ಬಂದಿಯಾ ಅಂತ ಬೈದು ಸಾವರ್ಜನಿಕ ಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಗಳಾದ ನೀವು ಭಾ.ನ್ಯಾ.ಸಂ. ಕಲಂ.352 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಅಲ್ಲೇ ಬಿದ್ದಿದ್ದ ಮರದ ಒಂದು ದೊಣ್ಣೆಯಿಂದ ಸಾಕ್ಷಿ 1 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಗಳಾದ ನೀವು ಭಾ.ನ್ಯಾ.ಸಂ. ಕಲಂ.118(1) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಆದ ನೀವು ಸಾಕ್ಷಿ-1 ರವರ ಮೈ-ಕೈ-ಕಾಲುಗಳಿಗೆ ನಿಮ್ಮ ಕಾಲುಗಳಿಂದ ಒದ್ದು ಒಳನೋವುಂಟು ಮಾಡಿ ಬಾಯಿಯಿಂದ ಚಾಸಾ 1 ರವರ ಎಡಗೈ ಮುಂಗೈಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಗಳಾದ ನೀವು ಭಾ.ನ್ಯಾ.ಸಂ. ಕಲಂ.115(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆ ಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ. ಕಲಂ.351(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.)

ಸ್ಥಳಃ ಹೊನ್ನಾಳಿ
ದಿನಾಂಕಃ 02.04.2026.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹೊನ್ನಾಳಿ.